## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಕೋಟ ಶ್ರೀನಿವಾಸ ಪೂಜಾರಿ ಇವರು ನಿಯಮ 72 ರ ಗಮನ ಸೆಳೆಯುವ ಸೂಚನೆ

**ವಿಷಯ:**

ಕಳೆದ 6 ತಿಂಗಳಿಂದ ಕೃಷಿಸಮ್ಮಾನ್ ಯೋಜನೆಯಡಿ ರಾಜ್ಯದ 54 ಲಕ್ಷ ರೈತ ಕುಟುಂಬಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಸಿಗಬೇಕಾದವಾರ್ಷಿಕದ ರೂ.4000/- ನಿಲುಗಡೆಯಾಗಿದ್ದು, ಈ ಬಗ್ಗೆ ಕೃಷಿ ಸಚಿವರ ಗಮನ ಸೆಳೆಯುವುದು.

**ಸರ್ಕಾರದ ಉತ್ತರ: -**

ಕೃಷಿ ಇಲಾಖೆಯಡಿಯ "ಕಿಸಾನ್ಸಮ್ಮಾನ್" ಯೋಜನೆಗೆ ಕೇಂದ್ರ ಸರ್ಕಾರದಿಂದ ರೂ.6000/-ಗಳನ್ನು ನೇರವಾಗಿ ರೈತ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದೆ. 2019ರಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ಮತ್ತೊಂದೆಡೆ ಭಾರಿ ಪ್ರವಾಹ ಬಂದಾಗ ಅಂದಿನ ಸರಕಾರ ಕೇಂದ್ರ ಸರ್ಕಾರದ ರೂ.6000 ವಂತಿಗೆಯೊಂದಿಗೆ ರಾಜ್ಯದ ಸರ್ಕಾರದ ವತಿಯಿಂದ ಪ್ರತಿ ರೈತ ಫಲಾನುಭವಿಗಳಿಗೆ ಪ್ರತಿಕಂತಿಗೆ ರೂ.2000/- ದಂತೆ ವಾರ್ಷಿಕ ರೂ.4000/- ಗಳನ್ನುನೀಡಲು ಘೋಷಿಸಲಾಗಿತ್ತು. 2019-20 ರಿಂದ 2022-23ನೇ ಸಾಲಿನವರೆಗೂ ಈ ಕೆಳಕಂಡಂತೆ ಸಹಾಯಧನವನ್ನು ಪಾವತಿ ಮಾಡಲಾಗಿದೆ.

| ಕ್ರ. ಸಂ | ಆರ್ಥಿಕ ವರ್ಷ | ಪ್ರತಿ ರೈತನಿಗೆ ನೀಡಲಾದ ತಲಾ ಸಹಾಯಧನ (ವಾರ್ಷಿಕ) | ಯಶಸ್ವಿ ಫಲಾನುಭವಿಗಳ ಸಂಖ್ಯೆ | ಆಯವ್ಯಯದಲ್ಲಿ ಮಾಡಲಾದ ವೆಚ್ಚ (ರೂ.ಕೋಟಿಗಳಲ್ಲಿ) |
|---|---|---|---|---|
| 1 | 2019-20 | 2000/- | 4529703 | 905.94 |
| 2 | 2020-21 | 2000/- | 4974465 | 994.89 |
| 3 | 2021-22 | 4000/- | 5035650 | 1975.12 |
| 4 | 2022-23 | 4000/- | 4800810 | 1917.59 |
| ಒಟ್ಟು | | | 19340628 | 5793.54 |

ಅಂದರೆ, ಘೋಷಿಸಲಾದ ಮೊದಲ ಎರಡು ವರ್ಷಗಳಲ್ಲಿ, ವಾರ್ಷಿಕ 2000/- ಗಳ ಸಹಾಯಧನವನ್ನು ಮಾತ್ರ ನೀಡಲಾಗಿದೆ

ಪ್ರಸ್ತುತ ಕೃಷಿ ಇಲಾಖೆಯಲ್ಲಿ ರೈತರ ಶ್ರೇಯೋಭಿವೃದ್ಧಿಗಾಗಿ ಯೋಜಿಸಲಾದ ರಾಜ್ಯ ವಲಯದ ಯೋಜನೆಗಳಾದ ಬೀಜ ವಿತರಣೆ ಕಾರ್ಯಕ್ರಮದಡಿ ರೂ 160 00 ಕೋಟಿ, ರಸಗೊಬ್ಬರ ದಾಸ್ತಾನು ಯೋಜನೆಯಡಿ ರೂ 40 00 ಕೋಟಿ, ಕೃಷಿ ಯಾಂತ್ರೀಕರಣ ಯೋಜನೆಯಡಿ ರೂ 120 00 ಕೋಟಿ, ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣಾ ಯೋಜನೆಯಡಿಯಲ್ಲಿ ಹಾರ್ವೆಸ್ಟರ್ ಹಬ್ ಯೋಜನೆಗಾಗಿ ರೂ.50.00 ಕೋಟಿಗಳನ್ನು ಒದಗಿಸಲಾಗಿದ್ದು, ಕೃಷಿ ಸಂಸ್ಕರಣೆ ಕಾರ್ಯಕ್ರಮಕ್ಕಾಗಿ ರೂ 35 00 ಕೋಟಿಗಳನ್ನು ರೈತರ ಬೆಳೆಗಳಿಗೆ ರಾಜ್ಯದ

ಪಾಲಿನ ವಿಮಾಕಂತನ್ನು ಪಾವತಿಸಲು ರೂ.600.00 ಕೋಟಿಗಳನ್ನು ಮೀಸಲಿರಿಸಲಾಗಿದೆ. ಮೇಲಾಗಿ ಐದು ವರ್ಷಗಳಿಂದ ಸ್ಥಗಿತವಗಿದ್ದ ಕೃಷಿ ಭಾಗ್ಯ ಯೋಜನೆಯನ್ನು ಪುನರ್ ಆರಂಭಿಸಿ ಅದಕ್ಕೆ ರೂ100 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಮುಂದುವರೆದು ಹನಿ ಮತ್ತು ತುಂತುರು ನೀರಾವರಿ ಯೋಜನೆಗೆ ಹೆಚ್ಚುವರಿ ಸಹಾಯಧನವನ್ನು ಒದಗಿಸುವುದನ್ನು ಒಳಗೊಂಡಂತೆ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅವಶ್ಯವಾದ ರಾಜ್ಯದ ಪಾಲನ್ನು ಒದಗಿಸಿ ರೈತ ಕುಟುಂಬಗಳ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಸಾಕಷ್ಟು ಅನುದಾನ ಒದಗಿಸಲಾಗುತ್ತಿದೆ. ಒಟ್ಟಾರೆಯಾಗಿ ಕೃಷಿ ಇಲಾಖೆಯಡಿ ರೂ.4058.30 ಕೋಟಿಗಳು, ತೋಟಗಾರಿಕೆ ಇಲಾಖೆಯಡಿ ರೂ.1281.38 ಕೋಟಿಗಳು ಮತ್ತು ರೇಷ್ಮೆ ಇಲಾಖೆಯಡಿ ರೂ.404.02 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಮುಂದುವರೆದು, ಪ್ರಸಕ್ತ 2023-24ನೇ ಸಾಲಿನಲ್ಲಿ ಘೋಷಣೆಯಾದ 5 ಗ್ಯಾರಂಟಿಯೋಜನೆಗಳಲ್ಲಿಯೂ ಸಹ ರೈತ ಕುಟುಂಬಗಳು ಫಲಾನುಭವಿಗಳಾಗಿದ್ದು, ಇದರಿಂದ ಪ್ರತಿ ಕುಟುಂಬಕ್ಕೆ ವಾರ್ಷಿಕ ಸುಮಾರು ರೂ.50,000ಗಳ ತನಕ ಸಹಾಯಧನ ಲಭ್ಯವಾಗಲಿದ್ದು, ಅವರ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಕಾಪಾಡಲು ಗಣನೀಯವಾದ ಕ್ರಮಗಳನ್ನು ರಾಜ್ಯ ಸರ್ಕಾರದಿಂದ ಕೈಗೊಳ್ಳಲಾಗಿದೆ.

**ಕಡತಸಂಖ್ಯೆ: ಆಇ 425 ವೆಚ್ಚ-4 2023**

(ಸಿದ್ದರಾಮಯ್ಯ)
ಮುಖ್ಯಮಂತ್ರಿ